ಅತ್ತೆ ಜಾಜಿ: ನೋಡೇ ಸೊಸಿ ಮುದ್ದು, ನಾನು ಗರ್ಭಿಣಿಯಾಗಿದ್ದಾಗ ಬಯಕೆ ಅಂತ ಏನೇನು ತಿಂಡಿ ತಿಂತಿದ್ದೆನೋ ಅದು ನಿನ್ನ ಗಂಡನಿಗೆ ಈಗಲೂ ಇಷ್ಟ ಕಣೇ.

ಸೊಸೆ ಸೂಜಿ: ಹೌದಾ ಅತ್ತೆ? ಆದ್ರೆ ನೀವು ಅಷ್ಟೊಂದು ಸಿಗರೇಟ್ ಸೇದ್ಬಾರ್ದಾಗಿತ್ತು...

***

ಶಿಕ್ಷಕರು: ಅಲ್ಲಯ್ಯಾ, ನೆಗಡಿ ಅಂತ ಸಾಲಿ ಬಿಡೋದು ನಿನಗೆ ಗೊತ್ತು ಡಾಕ್ಟರ್ ಸರ್ಟಿಫಿಕೇಟ್ ಎಲ್ಲಯ್ಯಾ?

ತಿಮ್ಮ: ಕೇಳಿದೆ ಸಾರ್, ನಾನ್ಯಾಕೆ ಕೊಡ್ಲಯ್ಯಾ ಅದು ನಾನು ಕಷ್ಟ ಪಟ್ಟು ಓದಿ ತೊಗೊಂಡಿದ್ದು ಅಂದ್ರು ಸರ್.

***

ತಿಮ್ಮ: ನಿಮ್ಮ ಅಂಗಡಿಯಲ್ಲಿ ಸೊಳ್ಳೆ ಕೊಲ್ಲುವ ಬ್ಯಾಟ್ ಇದೆಯಾ?

ಅಂಗಡಿಯಾತ: ಇದೆ ಕೊಡ್ಲಾ?

ತಿಮ್ಮ: ಕೊಡಿ. ಆದ್ರೆ ಸೊಳ್ಳೆ ಕೊಂದ ಪಾಪ ನನಗೆ ಬರುತ್ತೋ ಇಲ್ಲಾ ನಿಮಗೆ ಬರುತ್ತೋ?

ಅಂಗಡಿಯಾತ: ಯಾರಿಗೂ ಬರಲ್ಲ, ಸತ್ತರೆ ತಾನೆ? ಇದು ಚೀನಾ ಬ್ಯಾಟು ಕಣಯ್ಯಾ.

***

ಕೊರೊನ ಕಡಿಮೆಯಾಗಿತ್ತು ಅಂತ ಸಿನಿಮಾ ಟಾಕೀಸ್ ಚಾಲು ಆಗಿದ್ವು. ತಿಮ್ಮ, ತಿಮ್ಮಿ ಸಿನಿಮಾ ನೋಡಿ ಮನೆಗೆ ಬಂದ್ರು.

ತಿಮ್ಮಿ: ರೀ, ಒಳ್ಳೆ ಕಾಮಿಡಿ ಫಿಲ್ಮಂಗೆ ಕರ್ಕೊಂಡು ಹೋದ್ರಿ. ನಕ್ಕೂ ನಕ್ಕೂ ನನ್ ಅರ್ಧ ಜೀವಾನೆ ಹೋಯ್ತು.

ತಿಮ್ಮ: ಅರೆ, ಹೌದೇನೆ? ಹಂಗಾರ ಅದ್ನ ಇನ್ನೊಮ್ಮೆ ನೋಡಿ ಬರೋಣ ಬಾ.

***

ಬಾಸ್ ಭೂತಪ್ಪ: ಏನ್ರೀ ಇದು ತಿಮ್ಮಾ, ಮೊನ್ನೆ ತಾನೆ ಕಾಶಿಗೆ ಹೋಗಿ ಬಂದ್ರಿ. ಈಗ ಮತ್ತೆ ಕಾಶಿಗೆ ಹೋಗಲು ರಜೆ ಕೇಳ್ತಿದೀರಲ್ಲ?

ತಿಮ್ಮ: ಹೋಗಿದ್ದೆ ಸಾರ್, ಸುರಕ್ಷಿತವಾಗಿ ಊರು ತಲುಪಿದ್ರೆ ಮತ್ತೆ ಬರ್ತೀನಿ ಅಂತ ಹರಕೆ ಹೊತ್ತಿದ್ದೆ ಸಾರ್.




ತಿಮ್ಮ ಬೆಂಗಳೂರಿನ ಕಂಪನಿಯೊಂದರ ಸಂದರ್ಶನಕ್ಕೆ ಹಾಜರಾದ.

ಸಂದರ್ಶಕರು ಅವನ ಅರ್ಜಿಯನ್ನು ತಿರುವುತ್ತ ಕೇಳಿದರು. 'ನೀನು ಮನೆಯಲ್ಲಿ ದೋಣಿಯಿದೆ ಅಂತ ಒತ್ತು ಕೊಟ್ಟು ಬರೆದಿದ್ದೀಯಲ್ಲ ಯಾಕೆ?' ಎಂದು ಪ್ರಶ್ನಿಸಿದರು.

'ಸಾರ್ ಯಾಕಂದ್ರೆ, ಎಂಥ ಮಳೆ ಬಂದು ರಸ್ತೆಗಳೆಲ್ಲ ಹೊಳೆಯಾದ್ರೂ ದೋಣಿ ನಡೆಸಿಕೊಂಡು ಕೆಲಸಕ್ಕೆ ಬರ್ತೀನಿ. ರಜೆ ಹಾಕಲ್ಲ.' ತಿಮ್ಮ ವಿನಯದಿಂದ ನುಡಿದ.

***

ತಿಮ್ಮ: ನಮ್ಮ ಪ್ರೊಫೆಸರ್‌ಗೆ ಹುಚ್ಚು ಹಿಡಿದಿದೆಯಂತೆ ಕಣೇ.

ತಿಮ್ಮಿ: ಅದು ನನಗೆ ಮೊದಲೇ ಗೊತ್ತಾಗಿತ್ತೂರಿ.

ತಿಮ್ಮ: ಯಾವಾಗ ಗೊತ್ತಾಗಿತ್ತು ಕಣೇ.

ತಿಮ್ಮಿ: ಅವರು ನಿಮ್ಮ ಗುರು ಅಂತ ಗೊತ್ತಾದಾಗಲೇ!

***

ಆತ: ಹಾಳಾದ್ದು ಕೊರೊನಾದಿಂದಾಗಿ ಫಿಕ್ಸ್ ಆಗಿದ್ದ ನನ್ ಮಗಳ ಮದುವೇನೂ ಹಾಳಾತು.

ಈತ: ಮದುವೆ ಫಿಕ್ಸ್ ಆಗಿ ಇನ್ನೇನು ಕಲ್ಯಾಣ ಮಂಟಪ ಬುಕ್ ಮಾಡೋ ಹೊತ್ತಿಗೆ ಕೊರೊನಾದಿಂದ ಮುಂದಕ್ಕೆ ಹೋಯಿತು.

ಆತ: ಈಗ ಕೊರೊನಾ ಕಡಿಮೆ ಆಗಿದೆ ಮಾಡಬಹುದಲ್ಲ?

ಈತ: ಹುಡುಗ ಕೊರೊನಾದಿಂದ ನೌಕ್ರಿ ಕಳ್ಕೊಂಡಿದಾನೆ. ಈಗ ನನ್ನ ಮಗಳು ಅವನ ಜೊತೆ ಮದ್ವೆ ಆಗಲ್ಲ ಅಂತಿದಾಳೆ.

***

ತಿಮ್ಮ: ಲೇ, ಒಂದು ವೇಳೆ ನಾನು ಸತ್ತು ಹೋದ್ರೆ ಯಾರ ಜೊತೆ ಇರ್ತೀಯಾ?

ತಿಮ್ಮಿ: ಬೇಜಾರು ಕಣ್ರೀ, ಮತ್ತೊಂದು ಮದ್ವೇನೂ ಆಗಾಕಾಗಲ್ಲ. ನಮ್ಮ ತಂಗಿ ಜೊತೆ ಇರ್ತೀನಿ. ಸರಿ ಮತ್ತೆ ನಾನು ಒಂದು ವೇಳೆ ಸತ್ತು ಹೋದ್ರೆ ಯಾರ ಜೊತೆ ಇರ್ತೀರಿ?

ತಿಮ್ಮ: ನಂಗೂ ಬೇಜಾರು ಕಣೇ, ಮತ್ತೊಂದು ಮದ್ವೇನೂ ಆಗಲ್ಲ. ನಾನೂ ನಿಮ್ಮ ತಂಗಿ ಜೊತೇನೇ ಇದ್ಬಿಡ್ತೀನಿ.

**

ತಿಮ್ಮ: ಅಪ್ಪಾ, ನಾಳೆ ನನಗೆ ಕತ್ತೆ ಕೊಡ್ಸು.

ತಿಮ್ಮನ ತಂದೆ: ಯಾಕೋ? ಸಾಲಿ ಬಿಟ್ಟು ಕತ್ತೆ ಕಾಯ್ತೀಯಾ?

ತಿಮ್ಮ: ಹೌದು ಅಪ್ಪಾಜಿ. ಮೇಷ್ಟ್ರು ಹೇಳಿದ್ರು ಹೋಗಿ ಕತ್ತೆ ಕಾಯಿ ಅಂತ.

***

ಆಸ್ಟ್ರೇಲಿಯಾದಲ್ಲಿ ಮಳೆ ಬಂದಿದ್ದರಿಂದ ಕ್ರಿಕೆಟ್ ಪಂದ್ಯ ರದ್ದು ಮಾಡಬೇಕು ಅಂತ ಅಂಪೈರ್ ಚರ್ಚೆ ನಡೆಸಿದ್ರು. ಪ್ರೇಕ್ಷಕರ ಗ್ಯಾಲರಿಯಿಂದ ತಿಮ್ಮ ಕೂಗಿ 'ಪಂದ್ಯ ರದ್ದು ಮಾಡಕೂಡದು. ಮಳೆ ಬಂದಾಗ ನನ್ನ ಮದುವೆಯನ್ನೇನಾದರೂ ರದ್ದು ಮಾಡಿದ್ರಾ?' ಅಂದು ಹೇಳಿದ.

***

ತಿಮ್ಮಿ: ಏನ್ರೀ, ನಾನು ಎದ್ರಿಗೆ ಬಂದ್ರೆ ಇಯರ್ ಫೋನ್ ಹಾಕ್ಕೊಳ್ತೀರಿ. ಯಾಕೆ?

ತಿಮ್ಮ: ಡಾಕ್ಟರ್ ಶಬ್ದ ಮಾಲಿನ್ಯದ ಬಗ್ಗೆ ಹುಷಾರಾಗಿರಿ ಅಂದಿದ್ದಾರೆ.

(ಸಂಗ್ರಹ) ಪ್ರಕಾಶ.ಎಸ್.ಮನ್ನಂಗಿ, ಮೋಟೆಬೆನ್ನೂರು.

ಯಾವುದೋ ಕೆಲಸ ಮಾಡುತ್ತಿರಬೇಕಾದರೆ, ಜನರ ಪ್ರಶ್ನೆಗಳಿಗೆ ಹೀಗೆ ಉತ್ತರಿಸಬೇಕು.

(ಟೀ ಕುಡಿಯುತ್ತಿರಬೇಕಾದರೆ) ಏನು ಟೀ ಕುಡಿಯುತ್ತಿದ್ದೀರಾ?

ಹೌದು, ಕಲಗಚ್ಚು ಕುಡಿಯೋಣ ಅಂತಿದ್ದೆ. ನಮ್ಮನೆ ಓಣಿ ಎಮ್ಮೆ ಬಂದು ಕುಡ್ಕೊಂಡು ಹೋಯ್ತು. ಹಾಗಾಗಿ ನಾನು ಟೀ ಕುಡೀತಾ ಇದ್ದೀನಿ.

(ಜಾಗಿಂಗ್ ಮಾಡುವಾಗ) ಏನು ಜಾಗಿಂಗಾ?

ಇಲ್ಲಪ್ಪ....ನನಗೆ ಓಡೋ ಕಾಯಿಲೆಯಿದೆ. ನಾನು ಜೀವನವಿಡೀ ಓಡ್ತಾನೇ ಇರ್ತೀನಿ. ಈಗಷ್ಟೇ ಓಡಿಕೊಂಡು ಕಾಶ್ಮೀರದಿಂದ ಬಂದೆ. ನೀವಿದಕ್ಕೆ ಜಾಗಿಂಗ್ ಅಂತೀರಾ?

(ಪೇಪರ್ ಓದುತ್ತಿರಬೇಕಾದರೆ) ಏನು ಸುದ್ದಿ ಪೇಪರಿನಲ್ಲಿ?

ಯಾರಾದ್ರೂ ಹಿಂಗೆ ಕೇಳಿದರೆ, ಅವರಿಗೆ ಪೇಪರ್ ಕೊಡ್ಬೇಡಿ. ನೀವಷ್ಟೇ ಓದಿ ಅಂತ ಹೆಡಲೈನ್‌ನಲ್ಲಿ ಹಾಕಿದಾರೆ. ಅದೇ ಸುದ್ದಿ.

(ಪಾತ್ರೆ ತೊಳೆಯಬೇಕಾದರೆ) ಏನು ಪಾತ್ರೆ ತೊಳೀತಾ ಇದೀರಾ?

ಇಲ್ಲಪ್ಪ... ಈ ಪಾತ್ರೆಗಳ ಸೌಂಡ್ ಬಳಸಿ ಹೊಸ ಮ್ಯೂಸಿಕ್ ಕಂಪೋಸ್ ಮಾಡೋಣ ಅಂತಿದ್ದೀನಿ. ನನಗೆ ಲತಾ ಮಂಗೇಷ್ಕರ್ ಕಡೆಯಿಂದ ಭೇಷ್ ಅನ್ನಿಸಿಕೊಳ್ಳಬೇಕು ಅನ್ನುವ ಹುಚ್ಚಿದೆ.

***

(ವಾಷಿಂಗ್ ಮಷಿನ್ ಮನೆಗೆ ಬರುವ ಮೊದಲು ಹೀಗಿತ್ತು)

ಹೆಂಡತಿ (ಗಂಡನಿಗೆ) ರ್‍ರೀ..ಎಷ್ಟು ಸಾರಿ ಹೇಳಿದ್ದೀನಿ. ಒಂದು ಸಾರಿ ಹಾಕಿಕೊಂಡ ಶರ್ಟನ್ನು ಮೂರು ಸಾರಿಯಾದರೂ ಹಾಕಿಕೊಳ್ಳಿ ಅಂತ. ನನಗೇನು ಬರೀ ಬಟ್ಟೆ ಒಗೆಯೋದೇ ಕೆಲಸಾನಾ?

(ವಾಷಿಂಗ್ ಮಷಿನ್ ಖರೀದಿಯ ನಂತರ)

ಹೆಂಡತಿ ರ್‍ರೀ...ಎಷ್ಟು ಸಾರಿ ಹೇಳಿದ್ದೀನಿ. ಕೊಳಕಾದ ಶರ್ಟ್ ಹಾಕಿಕೊಳ್ಳಬೇಡಿ ಅಂತ. ಒಂದು ಸಲ ಹಾಕಿಕೊಂಡ ಮೇಲೆ ಒಗೆಯಲು ಹಾಕಿ. ಸ್ವಲ್ಪನಾದ್ರೂ ಕ್ಲೀನಾಗಿ ಇರೋದು ಕಲಿತುಕೊಳ್ಳಿ.

(ಸಂಗ್ರಹ) ಸುಘೋಷ ಸ. ನಿಗಳೆ